**ಓ.ಎಸ್. ನಂಬರ್ : 131/2019**
**ಪಿ .ಡಬ್ಲ್ಯೂ : 2**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 09.12.2025

**ಪಾಟೀ ಸವಾಲು : ಎದುರುದಾರರ ಪರವಾಗಿ ಶ್ರೀ ಡಿ.ಹೆಚ್ ವಕೀಲರಿಂದ**

ನಾನು 2016 ರಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೇನೆ. ಸದರಿ ಜಾಗದ ನಕ್ಷೆಯನ್ನು ನೋಡಿರುತ್ತೇನೆ. ಸದರಿ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ ನನಗೆ ಮರೆತು ಹೋಗಿದೆ. ಅದರ ವಿಸ್ತೀರ್ಣ ನನಗೆ ಮರೆತು ಹೋಗಿದೆ. ದಾವಾ ಸ್ವತ್ತು ನನ್ನ ಮಾರಾಟಗಾರರಿಗೆ ವಿಭಾಗದ ಮೂಲಕ ಬಂದಿರುತ್ತದೆ. ಸದರಿ ವಿಭಾಗ ಪತ್ರವನ್ನು ನಾನು ನೋಡಿರುತ್ತೇನೆ. ನಾನು ಅದನ್ನು ವಕೀಲರಿಗೆ ಕೊಟ್ಟಿದ್ದು ಅದನ್ನು ಅವರು ಹಾಜರುಪಡಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

1 ನೇ ವಾದಿಯು ನನಗೆ ಸುಮಾರು 10-12 ವರ್ಷಗಳಿಂದ ಪರಿಚಯ. ಸದರಿ ಸ್ವತ್ತನ್ನು ಖರೀದಿ ಮಾಡುವ ಸಂದರ್ಭದಲ್ಲಿ ಕ್ರಯ ಪತ್ರವಾಗುವ 3-4 ತಿಂಗಳ ಮುಂಚೆ ರೂ.1,00,000/- ಮುಂಗಡ ಹಣವನ್ನು ನಾನು 1 ನೇ ವಾದಿಗೆ ಕೊಟ್ಟಿರುತ್ತೇನೆ. ನಾನು ಅವರಿಗೆ ಮುಂಗಡ ಹಣ ಕೊಡುವಾಗ ನ್ಯಾಯಾಲಯದಲ್ಲಿ ದಾವಾ ನಡೆಯುತ್ತಿತ್ತು ಅಂದರೆ ನಾನು ಅವರನ್ನು ಕೇಳಿದ್ದು ಮೊಕದ್ದಮೆ ಮುಗಿದಿದೆ ಎಂದು ಹೇಳಿರುತ್ತಾರೆ. ನಾನು ಅವರಿಗೆ ಮುಂಗಡ ಹಣ ಕೊಡುವಾಗ ದಾವೆ ನಡೆಯುತ್ತಿದ್ದು ದಾವೆ ಮುಗಿದ 15 ದಿನಗಳ ಒಳಗಾಗಿ ನಾನು ಅವರಿಂದ ಕ್ರಯ ಪತ್ರ ಮಾಡಿಸಿಕೊಂಡಿದ್ದೇನೆ ಅಂದರೆ ನನಗೆ

ಗೊತ್ತಿಲ್ಲ ಎನ್ನುತ್ತಾರೆ. ನಾನು ಖರೀದಿ ಮಾಡುವಾಗ 1ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದರು ಅಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನನಗೆ 1ನೇ ವಾದಿ ಮತ್ತು 3ನೇ ವ್ಯಕ್ತಿಗಳು ತೋರಿಸಿರುತ್ತಾರೆ. ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ ದಾವಾ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಳ್ಳಲು ನಾನು ಪ್ರಯತ್ನಿಸಿಲ್ಲ ಅಂದರೆ 1ನೇ ಪ್ರತಿವಾದಿ ಸ್ವಾಧೀನ ಕೊಡಲು ತಕರಾರು ಮಾಡುತ್ತಿದ್ದರು ಎನ್ನುತ್ತಾರೆ. ಈ ಬಗ್ಗೆ ನಾನು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವುದಿಲ್ಲ. 1ನೇ ವಾದಿ ದೂರು ದಾಖಲಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ 2016 ರಿಂದಲೂ ಇದುವರೆಗೂ ನನ್ನ ಹೆಸರಿಗೆ ದಾವಾ ಸ್ವತ್ತಿನ ಖಾತೆ ಆಗಿಲ್ಲ ಅಂದರೆ 1ನೇ ಪ್ರತಿವಾದಿ ತಕರಾರು ಅರ್ಜಿ ಸಲ್ಲಿಸಿರುವುದರಿಂದ ಖಾತೆ ಆಗಿಲ್ಲ ಎನ್ನುತ್ತಾರೆ. ನಾನು ಖಾತೆ ಮಾಡಲು ಅರ್ಜಿ ಸಲ್ಲಿಸಿದ್ದೆನು ಎನ್ನುತ್ತಾರೆ. ಸದರಿ ಅರ್ಜಿಯ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಅಂದರೆ ನನ್ನ ವಕೀಲರಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ನಾನು ಪಂಚಾಯಿತಿಗೆ ಖಾತೆ ಬದಲಾವಣೆ ಮಾಡಲು ಯಾವುದೇ ಅರ್ಜಿಯನ್ನು ಸಲ್ಲಿಸದೇ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1ನೇ ಪ್ರತಿವಾದಿ ಸಲ್ಲಿಸಿದ ತಕರಾರು ಅರ್ಜಿಯನ್ನು ನಾನು ಪಡೆದುಕೊಂಡಿಲ್ಲ. ದಾವಾ ಸ್ವತ್ತಿನ ನೋಂದಣಿಯಾದ ನಂತರ ಅದರ ಸ್ವಾಧೀನವನ್ನು ಕೊಡುತ್ತೇನೆಂದು 1ನೇ ವಾದಿ ನನಗೆ ಹೇಳಿರುತ್ತಾರೆ. ದಾವಾ ಸ್ವತ್ತಿನ ಸಾಂಕೇತಿಕ ಸ್ವಾಧೀನವನ್ನು ನನಗೆ ಬಿಟ್ಟು ಕೊಡುತ್ತೇನೆಂದು ಕ್ರಯ ಪತ್ರದಲ್ಲಿ ಬರೆಯಲಾಗಿದೆ ಅಂದರೆ ಸರಿ. ಸದರಿ

ಕ್ರಯ ಪತ್ರದಲ್ಲಿ ಯಾರಿಗೂ ಬೋಗ್ಯ ಒಪ್ಪಂದ ಮಾಡಿಲ್ಲ ಎಂದು ನಮೂದಾಗಿದೆ ಅಂದರೆ ಸರಿ. 2 ನೇ ಪ್ರತಿವಾದಿಗೆ 1 ನೇ ವಾದಿಯು ಕ್ರಯ ಒಪ್ಪಂದ ಪತ್ರವನ್ನು ಮಾಡಿಕೊಟ್ಟಿದ್ದ ವಿಚಾರ ನನಗೆ ಗೊತ್ತಾ ಅಂದರೆ ಗೊತ್ತು ಅದು ನ್ಯಾಯಾಲಯದಲ್ಲಿ ಮುಕ್ತಾಯಗೊಂಡಿದೆ ಎಂದು ಹೇಳಿರುತ್ತಾರೆ ಎನ್ನುತ್ತಾರೆ. ನಾನು ದಾವಾ ಸ್ವತ್ತನ್ನು ಖರೀದಿ ಮಾಡುವಾಗ ಮುಂಗಡ ಹಣವನ್ನು ಕೊಡುವಾಗ ನ್ಯಾಯಾಲಯದಲ್ಲಿ ಕೇಸು ಮುಗಿದ ಬಗ್ಗೆ ದಾಖಲಾತಿಯನ್ನು ನೋಡಿರುತ್ತೀರಾ ಅಂದರೆ ಎಲ್ಲವನ್ನು ನನ್ನ ವಕೀಲರಿಗೆ ವಹಿಸಿರುತ್ತೇನೆ ಎನ್ನುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂಬರ್ ಪಾಲು ಪರಿಕತ್ತಿನ ಮೂಲಕ 1 ನೇ ವಾದಿಗೆ ಬಂದಿರುವುದಿಲ್ಲ ಅಂದರೆ ಸರಿಯಲ್ಲ. ಬಂದಿಲ್ಲದ ಕಾರಣ ಸದರಿ ಪಾಲುಪಟ್ಟಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆ 1 ನೇ ವಾದಿಗೆ ಆಗಿಲ್ಲ ಅಂದರೆ ಸರಿಯಲ್ಲ. ವಿಭಾಗ ಪತ್ರದ ಮೂಲಕ 1 ನೇ ವಾದಿಗೆ ದಾವಾ ಸ್ವತ್ತು ಬಂದಿಲ್ಲದೇ ಇದ್ದರೂ ಸಹ ಅವರ ಹೆಸರಿಗೆ ಸುಳ್ಳು ಖಾತೆ ಬದಲಾವಣೆ ಮಾಡಿರುತ್ತಾರೆ ಅಂದರೆ ಸರಿಯಲ್ಲ.

2 ನೇ ಪ್ರತಿವಾದಿಗೆ 1 ನೇ ವಾದಿಯು ಎಷ್ಟು ಹಣಕ್ಕೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದರು ಎಂದು ನಾನು ತಿಳಿದುಕೊಂಡಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
***ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,***
***ಸೋಮವಾರಪೇಟೆ.***